THE KARNATAKA RENT CONTROL (AMENDMENT) BILL, 1983.

Motion to consider

ಚೇರ್‌ಮನ್.—೧೯೮೩ನೇ ಇಸವಿ ಕರ್ನಾಟಕ ರಾಜ್ಯದ ಬಾಡಿಗೆ ನಿಯಂತ್ರಣ ತಿದ್ದುಪಡಿ ವಿಧೇಯಕ.

SRI V. S. PATIL (Minister for Revenue).—
Sir, I beg to move :

"That the Karnataka Rent Control (Amendment) Bill, 1983 be taken into consideration."

The question was proposed

ಶ್ರೀ ವಿ. ಎಸ್. ಪಾಟೀಲ್.—ಸ್ವಾಮಿ ರೆಂಟ್ ಕಂಟ್ರೋಲ್ ಆಕ್ಟ್ ೨೮-೨೨ ವರ್ಷಗಳಿಂದಲೂ ಜಾರಿಗೆ ಈ ರಾಜ್ಯದಲ್ಲಿ ಬಂದಿದೆ. ಈಗ ಏತಕ್ಕೆಂದರೆ ಟೌನ್ ಮುನಸಿಪಾಲೀಟಿಗಳನ್ನು ಸಿಟಿ ಮುನಿಸಿಪಾಲೀಟಿ ಎಂದು, ಸಿಟಿ ಮುನಸಿಪಾಲೀಟಿಗಳನ್ನು ಕಾರ್ಪೊರೇಷನ್ ಎಂದು ಮಾಡುವಾಗ, ಎಷ್ಟೋ ಖಾಯಿದೆಗಳಿಗೆ ಅಡೆತಡೆಗಳು ಬರತಕ್ಕಂಥದ್ದು ಇದೆ. ಅದಕ್ಕೋಸ್ಕರವಾಗಿ ಈ Rent Control Act ಗೆ ತಿದ್ದುಪಡಿ ತಂದಿದೆ. ಭಾರತ ಸೈನ್ಯದಲ್ಲಿ ಇರತಕ್ಕಂಥವರಿಗೆ ಅವರ ಮನೆಗಳನ್ನು ಅವರಿಗೆ ಬೇಕಾಗಿರುವ ಕುಟುಂಬದವರಿಗೆ ಸಿಗುವಂತೆ ಮಾಡುವುದರ ಸಲುವಾಗಿ ಎಲ್ಲ ವಿಧೇಯಕಗಳನ್ನು ಒಳಗೊಂಡ ಈ ವಿಧೇಯಕವನ್ನು ಸುಮಾರು ೧೦ ವರ್ಷಗಳ ಕಾಲ ಮುಂದುವರಿಸುವ ಹಾಗೆ ಮಾಡಿರುತ್ತೇವೆ, ಅಂದರೆ ೧೯೨೨ರ ವರೆಗೆ ಅದಕ್ಕಾಗಿ ತಾವು ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಗಂಗಾಧರನ್.—ಮಾನ್ಯ ಅಧ್ಯಕ್ಷರೆ ಆರ್ಮಿ ಫೋರ್ಸಸ್‌ನಲ್ಲಿ ಇರತಕ್ಕಂಥವರಿಗೆ ಮನೆಗಳನ್ನು ಬಿಡಿಸಿಕೊಡಬೇಕೆಂದು ತಿದ್ದುಪಡಿಯನ್ನು ತಂದಿದ್ದೀರಿ. ಜೊತೆಗೆ ೧೯೮೨ ಇದ್ದುದನ್ನು ೧೯೨೨ರ ವರೆಗೆ ರೆಂಟ್ ಕಂಟ್ರೋಲ್ ಆಕ್ಟ್‌ನ್ನು ಮುಂದುವರಿಸುತ್ತಿದ್ದೀರಿ. ಅದಕ್ಕೆ ಬರುತ್ತಿದ್ದೇನೆ. ಇಷ್ಟಿಷ್ಟೇ ಪೀಸ್‌ಮೀಲ್ ಆಗಿ ತರುತ್ತಿದ್ದೀರಿ. ಈ ಆಕ್ಟ್‌ನಲ್ಲಿರತಕ್ಕಂಥ ದೋಷ ತಮಗೂ ಗೊತ್ತಿದೆ. ನಮಗೂ ಗೊತ್ತಿದೆ ಈ ದೋಷ ಗೊತ್ತಾದ ನಂತರ ಕಳೆದ ಸದನದಲ್ಲಿ ಇದಕ್ಕೆ ಒಂದು ಸಮಿತಿಯನ್ನು ಮಾಡಿ ವರದಿ ತರಿಸಿಕೊಂಡು ಇದನ್ನು ಬದಲಾವಣೆ ಮಾಡಬೇಕೆಂದು ಮಾಡಿದೆವು. ಬದಲಾವಣೆಯ ಕಾರ್ಯ ಆಗಲಿಲ್ಲ. ಇದರಿಂದ ಎಷ್ಟು ತೊಡಕಾಗಿದೆ ಎಂದರೆ ನಗರ ಪ್ರದೇಶಗಳಲ್ಲಿ ಕಾಸ್ಮೊಪಾಲಿಟೀಸ್ ಆಕ್ಟಿವಿಟೀಸ್ ಸ್ಟಾಪ್ ಆಗಿದೆ. ಎಷ್ಟೋ ಹೊಸ ಮನೆಗಳನ್ನು ಕಟ್ಟತಕ್ಕಂಥ ಕ್ರಿಯೇ ಏನು ಇದೆ ಅದು ವಾಸ್ತವವಾಗಿ ನಿಲುಗಡೆಯಾಗಿದೆ. ಏತಕ್ಕೆಂದರೆ ಅಧಿಕಾರಿಗಳು ಸರ್ಕಾರಿ ನೌಕರಿಯಲ್ಲಿರತಕ್ಕಂಥವರು, ಅವರು ಬೆಂಗಳೂರಿನಲ್ಲಿ ಇರುತ್ತಾರೆ, ನಿವೃತ್ತಿಯಾದ ಮೇಲೆ ಮೈಸೂರಿಗೆ ಬರುತ್ತಾರೆ. ಬೆಂಗಳೂರಿನಲ್ಲಿ ಇದ್ದಾಗ ಮನೆಗಳನ್ನು ಬಾಡಿಗೆಗೆ ಕೊಟ್ಟುಬಿಟ್ಟಿರುತ್ತಾರೆ. ನಿವೃತ್ತಿಯಾದ ಮೇಲೆ ಈಗಿರತಕ್ಕಂಥ ಬಾಡಿಗೆ ಮನೆಗಳಲ್ಲಿ ಇರುವುದಕ್ಕೆ ಆಗುವುದಿಲ್ಲ. ಏತಕ್ಕೆಂದರೆ ಪೆನ್‌ಷನ್‌ನಲ್ಲಿ ಅಷ್ಟೊಂದು ದುಡ್ಡು ಕೊಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಮೈಸೂರಿಗೆ ಹೋದರೆ ಸ್ವಂತ ಮನೆಗಳನ್ನು ಬಿಡಿಸಿಕೊಳ್ಳಬೇಕಾದರೆ ೫-೮ ವರ್ಷಗಳು ಆಗತಕ್ಕಂಥ ಪರಿಸ್ಥಿತಿ ಇದೆ. ಇಂಥ ಅವ್ಯವಹಾರ ಇರತಕ್ಕಂಥ ಕಾಲದಲ್ಲಿ ಈ ತಿದ್ದುಪಡಿ ತೊಡಕಾಗಿದೆ ಜನ ಮನೆ ಕಾಲಿ ಇದ್ದರೂ ಕೊಡುವುದಕ್ಕೆ ಮುಂದೆ ಬರುವುದಿಲ್ಲ. ಮತ್ತೆ ಹಣವಿದ್ದರೂ ಮನೆಗಳನ್ನು ಕಟ್ಟುವುದಕ್ಕೆ ಹೋಗುವುದಿಲ್ಲ. ಈ ದೃಷ್ಟಿಯಿಂದ ಸುಲಭವಾಗಿ ಬಾಡಿಗೆ ಸಿಗುವಂತೆಯೂ ಮತ್ತು ಮನೆಗಳನ್ನು ಕಟ್ಟಿಸುವುದಕ್ಕೆ ಹಾಕಿದ ಬಂಡವಾಳಕ್ಕೆ ಕನಿಷ್ಟಪಕ್ಷ ಲಾಭವಾಗುವಂಥ ವ್ಯವಸ್ಥೆಯನ್ನು ಮಾಡಲು ಈ ಕಾನೂನಿನಲ್ಲಿ ತಿದ್ದುಪಡಿ ಮಾಡಬೇಕಾಗಿತ್ತು. ಈವತ್ತು ಅದನ್ನು ಮಾಡದೆ ಕೇವಲ ಆರ್ಮಿ ಫೋರ್ಸ್‌ಗೆ ಬಿಡಿಸುವುದಕ್ಕೆ ತಿದ್ದುಪಡಿಯನ್ನು ತಂದಿದ್ದೀರಿ. ಆದ್ದರಿಂದ ಒಂದು ಸಮಗ್ರವಾದ ಮಸೂದೆಯನ್ನು ತರಬೇಕು. ಈಗ ತಂದಿರತಕ್ಕಂಥ ತಿದ್ದುಪಡಿಯನ್ನು ವಿರೋಧ ಮಾಡತಕ್ಕಂಥದ್ದಲ್ಲ. ನಿವೃತ್ತಿಯಾಗಿರುವ ಮಿಲಿಟರಿ ಅಧಿಕಾರಿಗಳು ಬಂದರೆ ಅವರಿಗೆ ಅವಕಾಶ ಮಾಡಿಕೊಡಬೇಕು. ಕಾನೂನಿನಲ್ಲಿ ಅವಕಾಶ ಮಾಡಿಕೊಡುವುದಾದರೆ, ಕೋರ್ಟಿಗೆ ಹೋಗುತ್ತಾರೆ, ಅಲ್ಲಿ ತೀರ್ಮಾನವಾಗುತ್ತದೆ. ತೀರ್ಮಾನವಾದ ಮೇಲೆ ಹೋದರೆ ಮತ್ತೆ ೧೦ ವರ್ಷಗಳು ಆಗುತ್ತದೆ. ಬಿಡಿಸಿಕೊಳ್ಳುವ

ತನಕ ಮಿಲಿಟರಿ ಕ್ವಾರ್ಟರ್ಸ್‌ನಲ್ಲೇ ಇರಬೇಕಾಗುತ್ತದೆ. ನಿರ್ದಿಷ್ಟವಾಗಿ ೬ ತಿಂಗಳೊಳಗೆ ಫೈನಲೈಸ್ ಆಗಬೇಕು. ಫೈನಲ್ ರಿಪೋರ್ಟ್ ಆಗಬೇಕು. ಆ ರೀತಿ ಒಂದು ವ್ಯವಸ್ಥೆ ಮಾಡದೆ ಇಲ್ಲಿ ಒಂದು ಕ್ಲಾಸ್ ಇಟ್ಟರೂ ಕೂಡ ಅದು ಕನ್ನಡಿಯೊಳಗಿನ ಗಂಟಿನಂತಾಗುತ್ತದೆ. ಅವರು ಮನೆಗಳನ್ನು ಬಿಡಿಸಿಕೊಳ್ಳಲು ಆಗುವುದಿಲ್ಲ. ಆದ್ದರಿಂದ ಒಂದು ಸಮಗ್ರವಾದ ತಿದ್ದುಪಡಿಯನ್ನು ತಂದಿದ್ದಿದ್ದರೆ ಚೆನ್ನಾಗಿ ಇರುತ್ತವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ಮಾನ್ಯ ಗಂಗಾಧರನ್ ಅವರು ಈ ತಿದ್ದುಪಡಿ ವಿಧೇಯಕದಲ್ಲಿ ಹಲವಾರು ನ್ಯೂನತೆಗಳು ಇರುವ ಪ್ರಯುಕ್ತ ಖಂಡತುಂಡವಾಗಿ ತಿದ್ದುಪಡಿ ತರುವುದಕ್ಕೆ ಬದಲು ಸಮಗ್ರವಾದಂಥ ತಿದ್ದುಪಡಿ ಮಸೂದೆ ತರಬೇಕಾಗಿತ್ತು ಎಂಬ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಈ ಕೆಲವೊಂದು ನ್ಯೂನತೆಗಳಿರುವ ಕಾರಣದಿಂದ ಮನೆಗಳನ್ನು ಕಟ್ಟಿಸುವಂತಹ ಒಂದು ಕಾರ್ಯಕ್ರಮ ಕೂಡ ಸ್ಥಗಿತಗೊಂಡಿದೆ ಎಂದು ಹೇಳಿದ್ದಾರೆ. ಮನೆ ಬಾಡಿಗೆಗೆ ಕೊಟ್ಟರೆ ಬಿಡಿಸಿಕೊಳ್ಳುವುದು ಕಷ್ಟ ಮತ್ತು ಬಾಡಿಗೆಗೆ ಮನೆ ಸಿಗುವುದೂ ಕಷ್ಟ ಎಂಬತಕ್ಕಂಥ ಪರಿಸ್ಥಿತಿ ಈ ನಮ್ಮ ಸಮಾಜದಲ್ಲಿ ಉದ್ಭವವಾಗಿದೆ. ಇದಕ್ಕೆಲ್ಲಾ ಈಗಿರುವ ಕಾನೂನಿನ ವ್ಯಾಪ್ತಿ ಸರಿಯಾಗಿಲ್ಲವೆಂದು ಹೇಳಿದ್ದಾರೆ. ಈ ಕಾನೂನಿನ ಪ್ರಕಾರ ಬಾಡಿಗೆಗೆ ಕೊಟ್ಟಿರುವವರಿಗೂ ಅನುಕೂಲವಾಗಿಲ್ಲ ಮತ್ತು ಬಾಡಿಗೆಗೆ ತೆಗೆದುಕೊಂಡಿರುವವರಿಗೂ ಅನುಕೂಲವಾಗಿಲ್ಲವೆಂಬ ಮಾತನ್ನು ಸಹ ಹೇಳಿದ್ದಾರೆ. ಈ ಎಲ್ಲಾ ವಿಚಾರಗಳನ್ನು ಪೂರ್ಣವಾಗಿ ಅಧ್ಯಯನ ಮಾಡಲು ಒಂದು ಸಮಿತಿಯನ್ನು ಈ ಹಿಂದೆ ನೇಮಕ ಮಾಡಲಾಗಿತ್ತು. ಈ ವಿಚಾರದಲ್ಲಿ ಸುಪ್ರೀಂ ಕೋರ್ಟಿನ ತೀರ್ಪುಗಳು ಏನಿವೆ, ಬೇರೆಬೇರೆ ರಾಜ್ಯ ಹೈಕೋರ್ಟ್‌ಗಳ ತೀರ್ಪುಗಳು ಏನಿವೆ ಮತ್ತು ನಮ್ಮ ರಾಜ್ಯದ ಹೈಕೋರ್ಟ್ ತೀರ್ಪುಗಳು ಏನಿವೆ ಅವುಗಳನ್ನೆಲ್ಲಾ ಗಣನೆಗೆ ತೆಗೆದುಕೊಂಡು ಇದನ್ನು ಸಮಗ್ರವಾಗಿ ಬದಲಾವಣೆ ಮಾಡಬೇಕೆನ್ನುವ ದೃಷ್ಟಿಯಿಂದ ಒಂದು ಸಮಿತಿಯನ್ನು ನೇಮಕ ಮಾಡಲಾಗಿತ್ತು. ಇದರ ಪ್ರಕಾರ ಈಗಾಗಲೇ ರೆಂಟ್-ಕಂಟ್ರೋಲ್ ಆಕ್ಟ್‌ಗೆ ಬದಲಾವಣೆಗಳನ್ನೊಳಗೊಂಡಂತಹ ತಿದ್ದುಪಡಿಗಳನ್ನು ಪ್ರಮೀಳಾ ಕಮಿಟಿಯವರು ಸರ್ಕಾರಕ್ಕೆ ಕೊಟ್ಟಿದ್ದಾರೆ. ನಾನೂ ಸಹ ಆ ಕಮಿಟಿ ಸದಸ್ಯನಾಗಿದ್ದೆ. ಆದ್ದರಿಂದ ಇಲ್ಲಿಯವರೆಗೆ ಈ ಬಗ್ಗೆ ಏನೇನು ನಡೆದಿದೆ ಎಂಬುದನ್ನು ಮಾನ್ಯ ಸಭೆಗೆ ತಿಳಿಸುತ್ತಿದ್ದೇನೆ. ಈಗ ಅವರು ಕೊಟ್ಟಿರುವ ವರದಿಯನ್ನು ಶೀಘ್ರವಾಗಿ ಪರಿಶೀಲನೆ ಮಾಡಿ ಅದರ ಬಗ್ಗೆ ಮುಂದಿನ ಕಾರ್ಯಕ್ರಮವನ್ನು ಸರ್ಕಾರ ಕೈಗೊಳ್ಳುತ್ತದೆ ಅನ್ನುವ ಮಾತನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.— ಈ ಬಗ್ಗೆ ಸಮಗ್ರವಾದಂಥ ಬಿಲ್‌ನ್ನು ತರುವುದಾಗಿ ಹೇಳಿದ್ದಾರೆ. ಆ ರೀತಿ ತರದಿದ್ದರೆ ಬಹಳ ತೊಂದರೆಯಾಗುತ್ತದೆಂದು ಹೇಳಬೇಕಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.— ಈ ಮೊದಲು ೧೯೫೯ ರಿಂದ ೧೯೬೨ರವರೆಗೆ ಇದನ್ನು ವಿಸ್ತರಿಸಲಾಗಿತ್ತು. ಆನಂತರ ಮತ್ತೆ ೫ ವರ್ಷಗಳವರೆಗೆ ವಿಸ್ತರಿಸಲಾಯಿತು. ಹೀಗೆ ವಿಸ್ತರಿಸಿಕೊಂಡು ಬಂದಿದ್ದು ೧೯೮೨ ರ ಡಿಸೆಂಬರ್ ತಿಂಗಳಲ್ಲಿ ಮುಗಿದಿದ್ದ ಕಾರಣ ಮತ್ತೆ ೧೯೮೨ ರಿಂದ ೧೯೮೭ರವರೆಗೆ ವಿಸ್ತರಿಸಿ ಒಂದು ಆರ್ಡಿನೆನ್ಸ್ ಹೊರಡಿಸಲಾಯಿತು. ಈಗ ಆರ್ಡಿನೆನ್ಸ್ ಜಾಗದಲ್ಲಿ ಇದನ್ನು ತರಲಾಯಿತು.

ಶ್ರೀ ಎಂ. ಎಸ್. ಕೃಷ್ಣನ್.— ಈ ಸರ್ಕಾರದ ಅವಧಿ ೫ ವರ್ಷಗಳ ಕಾಲವಾಗಿದ್ದರೂ ಸಹ ತಾವು ಹತ್ತು ವರ್ಷಗಳವರೆಗೆ ವಿಸ್ತರಿಸಲು ಕಾರಣವೇನಿತ್ತು ,

ಶ್ರೀ ಎ. ಲಕ್ಷ್ಮೀಸಾಗರ್.— ೫ ವರ್ಷಗಳ ನಂತರವೂ ಜನರು ನಮಗೆ ಬೆಂಬಲ ಕೊಡುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.— ಕೊಟ್ಟರೆ ಸಂತೋಷ. ಆದರೆ ೫ ವರ್ಷಗಳವರೆಗೆ ಈ ಸರ್ಕಾರ ಅಧಿಕಾರದಲ್ಲಿರುತ್ತದೆ. ಆದ್ದರಿಂದ ೫ ವರ್ಷಗಳವರೆಗೆ ಕಮಿಟಿ ಮಾಡಿಕೊಳ್ಳುವುದಕ್ಕೆ ಬದಲು ಮುಂದಿನವರಿಗೂ ಸಹ ಪತಕ್ಕೆ ಕಮಿಟಿ ಮಾಡುತ್ತೀರಿ? ಈ ಬಗ್ಗೆ ಒಂದು ಸಮಗ್ರವಾದಂಥ ಶಾಸನ ಬರಬೇಕೆಂಬುದೇ ನಮ್ಮ ಅಭಿಪ್ರಾಯವಾಗಿದೆ. ಆದ್ದರಿಂದ ಅದನ್ನು ಆದಷ್ಟೂ ಶೀಘ್ರವಾಗಿ ತರಬೇಕೆಂದು ಹೇಳುತ್ತೇನೆ.

ಛೇರ್‌ಮನ್.— ಈ ಪ್ರಸ್ತಾವನೆಯನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾಪ ಏನೆಂದರೆ .--

ಕರ್ನಾಟಕ ರಾಜ್ಯದ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕ ೧೯೮೩ ಅನ್ನು ಸಭೆಯು ಪರಿಶೀಲಿಸುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡಗಳ ಪರಿಶೀಲನೆ

ಛೇರ್‌ಮನ್. – ಈಗ ವಿಧೇಯಕವನ್ನು ಖಂಡಖಂಡವಾಗಿ ಮತಕ್ಕೆ ಹಾಕುತ್ತೇನೆ.

ಖಂಡಗಳು ೨ ರಿಂದ ೫ರ ವರೆಗೆ

ಛೇರ್‌ಮನ್.-- ೨ ರಿಂದ ೫ರವರೆಗಿನ ಖಂಡಗಳು ವಿಧೇಯಕದ ಅಂಗಗಳು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು.

(ಎರಡರಿಂದ ಐದರವರೆಗಿನ ಖಂಡಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟವು)

ಮೊದಲನೆಯ ಖಂಡ ಇತ್ಯಾದಿ.

ಛೇರ್‌ಮನ್.--ಪ್ರಸ್ತಾವವೇನೆಂದರೆ, ''ಮೊದಲನೆಯ ಖಂಡ ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಅಂಗ ಗಳು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

''ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕಕ್ಕೆ ಸೇರಿಸಲ್ಪಟ್ಟವು''.

ಅನುಮೋದನಾ ಪ್ರಸ್ತಾವ

ಈಗ ಮಾನ್ಯ ಮಂತ್ರಿಗಳು ಪ್ರಸ್ತಾವವನ್ನು ಮಂಡಿಸಬಹುದು.

SRI V. L. PATIL.-- Sir, I beg to move.

''That the Karnataka Rent Control Amendment Bill 1983 be passed.''

ಛೇರ್‌ಮನ್.-- ಪ್ರಸ್ತಾವ ಏನೆಂದರೆ ?

''ಕರ್ನಾಟಕ ರಾಜ್ಯದ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕ ೧೯೮೩ ಅನ್ನು ಅನುಮೋದಿಸುವುದು''.

''ಪ್ರಸ್ತಾವ ಅಂಗೀಕರಿಸಲ್ಪಟ್ಟ ವಿಧೇಯಕ ಅನುಮೋದಿಸಲ್ಪಟ್ಟಿತು.''